ವಾಗಿಯೂ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು AIBP ಅಡಿಯಲ್ಲಿ ಅಪ್ರೂವಲ್ ಮಾಡಿಸುವಂತಹ ಕೆಲಸ ಮಾಡಿಸುತ್ತೇನೆ

ಅಧ್ಯಕ್ಷರು :- ಮುಂದಿನ ಪ್ರಶ್ನೆಗೆ ಹೋಗೋಣ.

Loss caused by – Excessive Rainfall

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಧಾರವಾಡ ಕೇಂದ್ರೀಯ) ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಾದ್ಯಂತ ಇತ್ತೀಚೆಗೆ ಸುರಿದಂತಹ ಭಾರಿ ಮಳೆಯಿಂದ ಪ್ರವಾಹ ಇತ್ಯಾದಿ ಅತಿವೃಷ್ಟಿಯಿಂದ ಉಂಟಾದಂತಹ ಪ್ರಕರಣಗಳೆಷ್ಟು? (ಪ್ರಾದೇಶಿಕ ವಿಭಾಗವಾರು ಮಾಹಿತಿ ನೀಡುವುದು.

ಆ) ಇಂತಹ ಮಳೆ ಪ್ರಭಾವದ ಅತಿವೃಷ್ಟಿ ಅನಾಹುತದಿಂದ ಹಾನಿಗೊಳಗಾದ ಬೆಳೆ ನಷ್ಟ ಜನ-ಜಾನುವಾರು ಪ್ರಾಣಹಾನಿ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು).

ಇ) ಸರ್ಕಾರ ಯಾವ ಯಾವ ಬೆಳೆಗಳಿಗೆ ಹಾಗೂ ಜನ-ಜಾನುವಾರು ಪ್ರಾಣ ಹಾನಿಗೊಳಗಾದವರಿಗೆ ನೀಡಿದ ಪರಿಹಾರವೆಷ್ಟು.

ಈ) ಸಂಕಷ್ಟಗೊಳಗಾದವರ ನಿರಾಶ್ರಿತರ ಪರಿಹಾರಕ್ಕಾಗಿ ಒದಗಿಸಿರುವ ಮೊತ್ತವೆಷ್ಟು?

ಉ) ಮಳೆ ಸಂಕಷ್ಟಕೊಳ್ಳಗಾದವರ ಕುಟುಂಬಕ್ಕೆ ಯಾವ ಯೋಜನೆ ರೂಪಿಸ ಲಾಗಿದೆ. ಇದಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರವು ಕಾಯ್ದಿರಿಸಿರುವ ಅನುದಾನವೆಷ್ಟು (ವಿವರಗಳನ್ನು ನೀಡುವುದು.)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಭಾರಿ ಪ್ರವಾಹದಿಂದ ಪರಿಸ್ಥಿತಿಯಿಂದ ಉಂಟಾದ ಹಾನಿಯ ವಿವರ ಕೆಳಕಂಡಂತಿವೆ· 1) ಜೀವ ಹಾನಿ – 119 2) ಜಾನುವಾರು ಹಾನಿ –286 3) ಮನೆ ಹಾನಿ – 15,990 4) ಕೃಷಿ ಬೆಳೆ ಹಾನಿ – 1,44,809 ಹೆಕ್ಟೇರ್ 5) ತೋಟಗಾರಿಕೆ ಬೆಳೆ ಹಾನಿ – 1,16,203 ಹೆಕ್ಟೇರ್, 6) ಮೂಲಭೂತ ಸೌಕರ್ಯ ಹಾನಿ – ರೂ. 425,63.

ಆ) ಕೋಟಿಗಳು.

ವಿವರ ಅನುಬಂಧ –1 ರಲ್ಲಿ ನೀಡಿದೆ.

ಇ) ಕೇಂದ್ರ ಸರ್ಕಾರದ ಎಸ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ ಸರ್ಕಾರ ದಿಂದ ಜೀವ ಹಾನಿಗೆ ರೂ.172.56 ಲಕ್ಷಗಳು, ಜಾನುವಾರು ಹಾನಿಗೆ ರೂ.19 18 ಲಕ್ಷ ಬೆಳೆ ಹಾನಿಗೆ – ರೂ.3,139–00 ಲಕ್ಷ, ಮನೆ ಹಾನಿಗೆ ರೂ 197.30 ಲಕ್ಷ, ಮೂಲಭೂತ ಸೌಕರ್ಯಗಳ ದುರಸ್ತಿಗಾಗಿ ರೂ.3,252,00 ಲಕ್ಷಮೊತ್ತದ ಕಾಮಗಾರಿ–ಗಳನ್ನು ಕೈಗೊಳ್ಳಲಾಗಿದೆ. ಇತರೆ ಪರಿಹಾರ ನೀಡಲು ರೂ 137.18 ಲಕ್ಷಗಳು ಒಟ್ಟು ರೂ 6,924 11 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ವಿವರ ಅನುಬಂಧ–2 ರಲ್ಲಿ ನೀಡಿದೆ.

ಈ) ಪ್ರಕೃತಿ ವಿಕೋಪದಿಂದ ಅನಾಹುತಗಳಿಗೆ ಪರಿಹಾರ ನೀಡಲು ಕೇಂದ್ರ ಸರ್ಕಾರ ರೂಪಿಸಿರುವ ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ನಿಯ ಮಾನುಸಾರ ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದ ಕ್ಕಾಗಿ ಎಸ್.ಡಿ.ಆರ್.ಎಫ್ ನಿಧಿಯಲ್ಲಿ ರೂ.186.33 ಕೋಟಿ ಅನುದಾನ ಕಾಯ್ದಿರಿಸಲಾಗಿದೆ ಇದರಲ್ಲಿ ಕೇಂದ್ರದ ಪಾಲು ರೂ.139.75 ಕೋಟಿ (75%) ಅನುದಾನ ರಾಜ್ಯದ ಪಾಲು ರೂ.46.58 ಕೋಟಿ (25%). 2013–14ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಆದ ಹಾನಿಗೆ ರೂ.610.00 ಕೋಟಿಗಳ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೋರ್ಯಾಡಂ ಸಲ್ಲಿಸಲಾಗಿದೆ.

2013–14ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಹಾನಿಯಾದ ವಿವರಗಳು

ಕ್ರ ಸಂ	ಜಿಲ್ಲೆ	ಮಾನವ ಜೀವ/ಹಾನಿ	ಜಾನುವಾರು ಹಾನಿ	ಮನೆ ಹಾನಿ (ಸಂ)	ಮನೆ ನಷ್ಟ ಮೊತ್ತ	ಮೂಲಭೂತ ಸೌಕರ್ಯ ಹಾನಿ	ಒಟ್ಟು ಹಾನಿ
1	ಬೆಂಗಳೂರು. ನ					0	0 00
2	ಬೆಂಗಳೂರು ಗ್ರಾ	5		158	94.39	21.11	45.50
3	ಬಾಗಲಕೋಟೆ		3	856	998.42	0	998.42
4	ಬೆಳಗಾವಿ	14	7	11 89	498.35	6888.00	7386.00
5	ಬಿಜಾಪುರ	1				155 15	155.15
6	ಬೀದರ್	5				0 00	0.00
7	ಬಳ್ಳಾರಿ	1	65	431	208 16	0 00	208 16
8	ಚಾಮರಾಜನಗರ	1		263	23.67	295 08	318.75
9	ಚಿತ್ರದುರ್ಗ	2	48	10 83	460 29	0 00	460 29

10	ಚಿಕ್ಕಬಳ್ಳಾಪುರ	7				7998 30	7998 30
11	ಚಿಕ್ಕಮಗಳೂರು	5	15	398	238.39	414 99	653 38
12	ದಕ್ಷಿಣ ಕನ್ನಡ	18	16	909	444.44	3714.49	4158 93
13	ಧಾರವಾಡ	9	2	11 55	489 00	2016 00	2505.00
14	ದಾವಣಗೆರೆ	2	26	735	336 76	537 19	873 95
15	ಗದಗ	1	4	23 44	1008. 40	103.04	1111 44
16	ಗುಲ್ಬರ್ಗ	10	25			0 00	0 00
17	ಹಾಸನ	1				0.00	0 00
18	ಹಾವೇರಿ	5	28	1739	746.85	19 16	766 01
19	ಕೊಪ್ಪಳ	6				4271 25	4271 25
20	ಕೊಡಗು	1	16	691	410.21	0.00	410 21
21	ಕೋಲಾರ	3				0 00	0 00

22	ಮೈಸೂರು	1	11	664	275.06	0 00	275.06
23	ಮಂಡ್ಯ	3				504.10	504 10
24	ರಾಮನಗರ	4				3913 31	3913.31
25	ರಾಯಚೂರು			129	50.36	0.00	50.36
26	ಶಿವಮೊಗ್ಗ	3	5	1628	968.66	5279 32	6247.98
27	ತುಮಕೂರು	3	1	843	365.95	103 27	469.22
28	ಉತ್ತರಕನ್ನಡ	2	8	320	152.74	2045.35	2198.09
29	ಉಡುಪಿ	6	6	455	439.05	4284 65	4273 70
30	ಯಾದಗಿರಿ					0.00	0.00
	Total	**119**	**286**	**15990**	**8209.1532**	**42563 81**	**50772 96**

Annexure-2

Details of Agriculture Crops Affected due to Excess Rainfall/Floods during Kharif 2013-14

Crop (Area in Hectares)

Districts	Paddy	Jowar	Bajra	Maize	Tur	Green Gram	Black Gram	Groundnut/Castor	Cotton	Sugarcane	Soyabean	Sunflower	Sesamum	Chillies	Onion	Other Crops	Total Area Affected in Ha
Crop Loss occurred up to August 2013																	
[illegible]		951	6642	7706	3371	27	331	476	475	0251			10693	1	24719		[illegible]
[illegible]	2205																2055
[illegible]	2	[illegible]		2-331				59	3281			[illegible]	24551	251			[illegible]
[illegible]	[illegible]			1055				0					791				15255
[illegible]	[illegible]																[illegible]
[illegible]	7																72
[illegible]	[illegible]																67
[illegible]			5	26 81									151				2639
Crop Loss Occurred during September 2013																	
[illegible]								161	18			[illegible]		[illegible]			[illegible]
[illegible]																	[illegible]
[illegible]	[illegible]			2371	10			0751	1						361		[illegible]
[illegible]	391	11		[illegible]	462				932		21		[illegible]				[illegible]
3211													31				[illegible]
[illegible]				5[illegible]								[illegible]	[illegible]				[illegible]
[illegible]				41								1	11	[illegible]			[illegible]
[illegible]					[illegible]	[illegible]	[illegible]			0		[illegible]					[illegible]
Total Area affected	11 [illegible]	2301	[illegible]	45[illegible]	1332	4940	4171	3499	1793	611	97	10782	229[illegible]	1136	24729	0	[illegible]
Cost of estimated loss in Crores (Rs. in Crores)	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]		
Total Estimated loss assessment of Crop of cultivation (Rs. Lakhs)	[illegible]	[illegible]		[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]

Rs. In Crore

[illegible]

Annexure-2

Details of horticulture Crops affected due to Floods during 2013-14 (in ha)

S. No. District	Potato	Tomato	Onion	Chilli	Peas	Gourds	Banana	Other vegetables	Ginger	Tuberose	Marigold	Total (in Ha)
[illegible]						21	421					42
[illegible]	4160						571		1205			6125
[illegible]							0.43					0.43
[illegible]	[illegible]	55	4337	177	74		1082	120	639			10193
[illegible]							0.74					0.74
[illegible]							20	30	431	5		506
[illegible]												0
[illegible]							50	50	200			300
[illegible]		0.5				4.34	7.95	6.24				18.84
[illegible]			100	[illegible]			4.52	5			3	145.62
[illegible]		15		5			2	2				24
Total	8312	70.5	4437	443.8	74	6.34	1253.95	214.04	2378	5	3	17355.63
Cost of [illegible]	70000	8000	70355	70340	70000	50000	25635		128574	167500	68250	
Total Loss Rs in lakhs	5956.95	64.16	3181.06	312.17	51.83	3.17	2332.10	0.00	3059.87	8.38	2.05	14971.65

Rs 149.71 crores

Details of Horticulture Crops affected due to floods during 2013 14

S No	District	Coconut	Areca nut (Tall)	Areca nut (other than Tall)	Pepper	Cocoa	Cashew	Cardamom	Mango	Guava	Rubber	Oilpalm	Rose	Chrysanthemum	Total (in ha)
1	Dakshina Kannada	[illegible]	50						5						60
2	Udupi		122		1.81			1432							2242
3	Chikkamagaluru	[illegible]	24541		0.07	0.2	0.18								24541.75
4	Shimoga		2.000		3.25			525							24357
5	Udupi		7216	4.78			15.55				2.4				7243.91
6	Shimoga		21815												21815
7	Uttara Kannada		12302												12302
8	Kodagu		2724		4300										6054
9	Bangalore Urban								24				5.81	12.75	42.56
10	Tumkur									8.2					8.2
11	Belagavi											2			2
	Total	11.17	68405	4.78	8210.07	0.2	17.04	1957	29	8.2	2.4	2	5.81	12.75	98668.42
	Cost of cultivation/ha	75.00	181504	281834	107598	162455	53654		66856	71915	75000	58810	263000	123000	
	Estimated loss in lakhs	0.38	154929.28	8.69	8858.50	0.32	9.18	0.00	19.39	5.90	1.80	1.18	15.28	15.68	163873.58

Rs 1638.73 crores

ಶ್ರೀ ಜಗದೀಶ್ ಶೆಟ್ಟರ್ .– ಮಾನ್ಯ ಅಧ್ಯಕ್ಷರೆ, ಈ ನೆರೆ ಹಾವಳಿಯಿಂದ/ಅತಿವೃಷ್ಟಿಯಿಂದ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಪ್ರಮುಖವಾಗಿ 3,139 ಲಕ್ಷ ರೂ.ಗಳ ಬೆಳೆ ಹಾನಿಯಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅಷ್ಟು ಬೆಳೆ ಹಾನಿಗೆ ಪರಿಹಾರವನ್ನು ಸಂಬಂಧಪಟ್ಟಂತಹ ರೈತರಿಗೆ ಕೊಟ್ಟಿದ್ದೀರಾ? ಎಂಬ ಬಗ್ಗೆ ನನಗೆ ಉತ್ತರ ಬೇಕಾಗಿದೆ. ಕೇಂದ್ರ ಸರ್ಕಾರಕ್ಕೆ ನೀವು ಎಷ್ಟು ಹಾನಿಯಾಗಿದೆ ಎಂದು memorandum ಕೊಟ್ಟಿದ್ದೀರಿ? ಅದಕ್ಕೆ ಕೇಂದ್ರ ಸರ್ಕಾರ ವಿಶೇಷವಾದಂತಹ ಅನುದಾನವನ್ನೇನಾದರೂ ಕೊಟ್ಟಿದೆಯೇ ಎಂಬುದರ ಬಗ್ಗೆಯೂ ನನಗೆ ಸ್ಪಷ್ಟವಾದಂತಹ ಉತ್ತರ ಬೇಕಾಗಿದೆ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆಗೂ ಅತಿವೃಷ್ಟಿಯಿಂದಾಗಿ ರಸ್ತೆಗಳು ಕೆಟ್ಟು ಹೋಗಿವೆ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತಹ ಕೆಲಸ ಇದುವರೆಗೂ ಆಗಿಲ್ಲ. ಹಾಗಾದರೆ, ಆ ರಸ್ತೆಗಳ ಸಲುವಾಗಿ, ಅದರಲ್ಲಿರುವ ಗುಂಡಿಗಳನ್ನು ಮುಚ್ಚುವ ಸಲುವಾಗಿ, ಇಲ್ಲಿಯವರೆಗೆ ಎಷ್ಟು ಹಣವನ್ನು ರಿಲೀಸ್ ಮಾಡಿದ್ದೀರಿ? ಎಲ್ಲಿಯಾದರೂ ಆ ಕಾಮಗಾರಿ ಮುಗಿದಿದೆಯೇ ಎನ್ನುವ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು. ಎಲ್ಲಾ ಕಡೆಗೂ ಅನಾಹುತವಾಗಿದೆ.

ಶ್ರೀ ವಿ. ಶ್ರೀನಿವಾಸ/ಪ್ರಸಾದ್ :– ಮೊದಲನೆಯದಾಗಿ, ಬೆಳೆಗಳಿಗೆ ಆಗಿರತಕ್ಕ ಹಾನಿಯ ಬಗ್ಗೆ ಪ್ರಸ್ತಾಪಿಸಿದ್ದೀರಿ. ಅಲ್ಲದೆ ಜನ ಜಾನುವಾರು ಪ್ರಾಣಹಾನಿ ಎಷ್ಟು? ಅದಕ್ಕೆ ಏನು ಪರಿಹಾರ ಕೊಟ್ಟಿದ್ದೀರಿ? ಎಂದೂ ಕೂಡ ಪ್ರಶ್ನೆ ಕೇಳಿದ್ದೀರಿ Specific ಆಗಿ ಬೆಳೆಗಳಿಗೆ ಆಗಿರುವ ಹಾನಿಯ ಬಗ್ಗೆ ಪರಿಹಾರವನ್ನು ಸಂಬಂಧಪಟ್ಟವರಿಗೆ ವಿತರಿಸಿದ್ದಿರಾ? ಎಂದು ಈಗ ಕೇಳುತ್ತಿದ್ದೀರಿ. ನಾವು ಕೇಂದ್ರ ಸರ್ಕಾರ ರೂಪಿಸಿರುವ SDRF ಈ ಮಾರ್ಗ ಸೂಚಿಯಂತೆ ಸರ್ಕಾರ ಜೀವ ಹಾನಿಗೆ ಎಷ್ಟು ದುಡ್ಡು ಕೊಟ್ಟಿದೆ ಎಂಬುದನ್ನು ಉತ್ತರದಲ್ಲಿ ಹೇಳಿದ್ದೇನೆ. ಬೆಳೆ ಹಾನಿಗೆ ವಿಶೇಷವಾಗಿ 3,139 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಅದರ ಬಗ್ಗೆ ವಿವರಗಳು ಅನುಬಂಧದಲ್ಲಿವೆ. ನೀವು ವಿಭಾಗವಾರು ಮಾಹಿತಿ ಕೇಳಿದ್ದೀರಿ, ಅದನ್ನೂ ನಾನು ಕೊಟ್ಟಿದ್ದೇನೆ ಈಗಾಗಲೇ ತಮಗೆ ಗೊತ್ತಿರುವಂತೆ ನಾವು ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಮಳೆಯಿಂದ ಆಗಿರತಕ್ಕಂಥ ಅನಾಹುತಕ್ಕೆ ಹಣ ಬಿಡುಗೆಡೆ ಮಾಡುವಂತೆ

Memorandum ಅನ್ನು ಕೊಟ್ಟಿದ್ದೇವೆ. ಅದರಲ್ಲಿ ನಮಗೆ ಹೆಚ್ಚು ಮಳೆ ಬಂದು ಸುಮಾರು 8742.14 ಕೋಟಿ ರೂ.ಗಳ ನಷ್ಟವುಂಟಾಗಿದೆ ಎಂದು ಹೇಳಿದ್ದೇವೆ ಕೇಂದ್ರ ಸರ್ಕಾರ ರೂಪಿಸಿರುವ SDRF norms ಪ್ರಕಾರ 610.84 ಕೋಟಿ ರೂ.ಗಳನ್ನು ನಮಗೆ ಕೊಡಬೇಕೆಂದು ಕೂಡ ಈಗಾಗಲೇ ಹೇಳಿದ್ದೇವೆ. ರಾಜ್ಯ ಸರ್ಕಾರದಿಂದ ಎಲ್ಲಿ ಮಳೆಯಾಗಿದೇಯೋ, ಪ್ರವಾಹ ಉಂಟಾಗಿದೆಯೋ, ಅಂತಹ ಕಡೆಗಳಲ್ಲಿ ಸುಮಾರು 79 46 ಕೋಟಿ ರೂ.ಗಳನ್ನು ಈಗಾಗಲೇ ನಾವು ವಿತರಣೆ ಮಾಡಿದ್ದೇವೆ. [ಎಲ್ಲೆಲ್ಲಿ ಮಳೆ ಬಂದು ಪ್ರವಾಹ ಉಂಟಾಗಿತ್ತೋ, ಅಂತಹ ಕಡೆಗಳಲ್ಲಿ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ.]

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ವಿಷಯಗಳಿವೆ.

ಅಧ್ಯಕ್ಷರು :– ಮಾನ್ಯ ಶೆಟ್ಟರ್‌ರವರು ಇನ್ನೋಂದು ಪ್ರಶ್ನೇಯನ್ನು ಕೇಳಲಿದ್ದಾರೆ ಅವರ ನಂತರ ನೀವು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಆಯಿತು.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರಕ್ಕೆ ರಾಜ್ಯ ಎಷ್ಟು ಹಣ demand ಮಾಡಿತ್ತು? ಅದಕ್ಕನುಗುಣವಾಗಿ ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಕೇಂದ್ರದವರು regular ಆಗಿ ಪ್ರತಿ ವರ್ಷ ಕೊಡುವಂತಹ ಹಣ ವನ್ನೇ ಕೊಟ್ಟಿದ್ದಾರೆಯೇ? ಅಥವಾ ಇದಕ್ಕಾಗಿ ವಿಶೇಷವಾದಂತಹ ಅನುದಾನ ವನ್ನೇನಾದರು ಕೊಟ್ಟಿದ್ದಾರೆಯೇ? ಎಂಬುದಕ್ಕೆ ಮಾನ್ಯ ಸಚಿವರು ಉತ್ತರ ನೀಡ ಬೇಕು ಬಹಳಷ್ಟು ಜಿಲ್ಲೆಗಳಲ್ಲಿ ರೈತರು ತಮ್ಮ ಬೆಳೆ ಹಾನಿಗೆ ಇವತ್ತಿನವರೆಗೂ ಕೂಡ ಸರ್ಕಾರ ಇನ್ನೂ ಪರಿಹಾರ ಕೊಟ್ಟಿಲ್ಲವೇಂದು ದೂರುತ್ತಿದ್ದಾರೆ. ಆದರೆ ನೀವು ಇಲ್ಲಿ ಪರಿಹಾರ ಕೊಟ್ಟಿದ್ದೇವೆಂದು ಹೇಳುತ್ತಿದ್ದಿರಿ. ಇದು ಸತ್ಯಕ್ಕೆ ದೂರ ವಾದಂತಹ ಸಂಗತಿಯಾಗಿದೆ. ಅದರ ಬಗ್ಗೆಯೂ ಮಾನ್ಯ ಸಚಿವರು ಸ್ಪಷ್ಟೀ ಕರಣ ಕೊಡಬೇಕು. ಇಡೀ ರಾಜ್ಯದಲ್ಲಿ ರಸ್ತೆಗಳು ಪೂರ್ತಿ ಹದಗೆಟ್ಟು

ಹೋಗಿವೆ. ಆ ರಸ್ತೆಗಳನ್ನು ರಿಪೇರಿ ಮಾಡುವಂಥದ್ದು ಇವತ್ತಿನವರೆಗೂ ಆಗಿಲ್ಲ. ಅದಕ್ಕೆ ಏತಕ್ಕಾಗಿ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ವಿ.ಶ್ರೀನಿವಾಸ ಪ್ರಸಾದ್ :– ರಸ್ತೆಗಳಿಗೆ ಹಣವನ್ನು ಪೂರ್ಣವಾಗಿ ನಾವು ಬಿಡುಗಡೆ ಮಾಡುವುದಿಲ್ಲ.

ಅಧ್ಯಕ್ಷರು :– ಮಾನ್ಯ ಉಮೇಶ್ ಕತ್ತಿಯವರೂ ಸಹ ಸ್ಪಷ್ಟೀಕರಣ ಕೇಳಲಿದ್ದಾರೆ. ಒಂದೇ ಸಲ ಎಲ್ಲದಕ್ಕೂ ಸೇರಿಸಿ ಉತ್ತರ ಹೇಳಿಬೀಡಿ.

ಶ್ರೀ ಉಮೇಶ್ ವಿ.ಕತ್ತಿ :– ಚುನಾವಣೆಗೆ ಮುಂಚೆ ರಸ್ತೆಗಳನ್ನು ಮಾಡಲಿಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿತ್ತು. ಆಗ ನಮ್ಮ ಸರ್ಕಾರವಿತ್ತು. ಚುನಾವಣೆ ನಡೆದಂತಹ ಸಂದರ್ಭದಲ್ಲಿ ಆ ಹಣವನ್ನು ಹಂಚಲಿಕ್ಕಾಗಲ್ಲಿಲ್ಲ. ಈ ಸರ್ಕಾರ ಬಂದ ಮೇಲೆ, ಚುನಾವಣೆ ನೀತಿ ಸಂಹಿತೆ ಹೋದಮೇಲೆ, ಆ ದುಡ್ಡು ಬಿಡುಗಡೆಯಾಗಿದೆ ಈ ವರ್ಷ ನೀವು ಯಾವ ಬೆಳೆ ಹಾನಿ ಪರಿಹಾರವನ್ನು ಸಹ ಕೊಟ್ಟಿಲ್ಲ. ಅದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ :– ಬೆಳೆ ಹಾನಿ ಪರಿಹಾರವನ್ನು ಕೊಟ್ಟಿದ್ದೇವೆ..

ಅಧ್ಯಕ್ಷರು :– ಮಾನ್ಯ ಬೋಪಯ್ಯನವರು ಮಾತನಾಡುತ್ತಾರೆ. ಎಲ್ಲವನ್ನು ಒಟ್ಟಿಗೆ ಸೇರಿಸಿ ಉತ್ತರ ಕೊಡಿ.

ಶ್ರೀ ಕೆ.ಜಿ.ಬೋಪಯ್ಯ :– ಬೆಳೆ ಹಾನಿ ಪರಿಹಾರದ ಬಗ್ಗೆ ಬೇರೆ ಎಲ್ಲಾ ಜಿಲ್ಲೆಗಳ ಬಗ್ಗೆ ಇಲ್ಲಿ ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕಾಫಿ ಬೆಳೆ ಎಂಬುದೊಂದು ಇದೆ. ನಿಮಗೆ ಕಾವೇರಿ ನೀರು ಮಾತ್ರ ಬೇಕು. ನಮ್ಮಲ್ಲಿನ ಕಾಫಿ ಬೆಳೆಗಾರರಿಗೆ ನೀವು ಏಕೆ ಬೆಳೆ ಹಾನಿ ಪರಿಹಾರ ಕೊಟ್ಟಿಲ್ಲ?

ಅಧ್ಯಕ್ಷರು :– ನೀವು ಇಲ್ಲಿ ಪ್ರಶ್ನೆ ಕೇಳಿ.

ಶ್ರೀ ಕೆ.ಜಿ.ಬೋಪಯ್ಯ .– ಕಾಫಿ ಬೆಳೆಗಾರರಿಗೆ ಪರಿಹಾರ ಕೊಟ್ಟಿರುವ ಬಗ್ಗೆ ಒಂದು ಶಬ್ದವೂ ಕೂಡ ಮಾನ್ಯ ಸಚಿವರ ಉತ್ತರದಲ್ಲಿ ಇಲ್ಲ.

ಶ್ರೀ ಸಿ.ಟಿ.ರವಿ – ಕಾಫಿ ಬೆಳೆಯೂ ಕೂಡ ನಷ್ಟವಾಗಿದೆ. ಆದರೆ ಅದರ ಬಗ್ಗೆ ಇಲ್ಲಿ ಪ್ರಸ್ತಾಪವೇ ಇಲ್ಲ.

ಶ್ರೀ ಕೆ.ಜಿ.ಬೋಪಯ್ಯ – ಒಳ್ಳೆ ಮೆಣಸೂ ಸಾಕಷ್ಟು ನಷ್ಟವಾಗಿದೆ. ನಿಮ್ಮ annexure ನಲ್ಲಿ ಕಾಫಿಯೂ ಕಾಣುವುದಿಲ್ಲ ಒಳ್ಳೆ ಮೆಣಸೂ ಕಾಣುವುದಿಲ್ಲ, ಏಲಕ್ಕಿಯೂ ಕೂಡ ಕಾಣುವುದಿಲ್ಲ.

ಅಧ್ಯಕ್ಷರು :– ಮಾನ್ಯ ಬೋಪಯ್ಯನವರೆ, ತಾವು ದಯವಿಟ್ಟು ಇನ್ನೊಂದು ಸಲ ಪ್ರಶ್ನೆಯನ್ನು ಓದಿಕೊಳ್ಳಿ. ಪ್ರಶ್ನೆಗೆ ತಕ್ಕ ಉತ್ತರವನ್ನು ಮಾತ್ರವೇ ಸಚಿವರು ಹೇಳಲು ಸಾಧ್ಯ ಕಾಫಿ ಬೆಳೆ ಬಗ್ಗೆ ಇಲ್ಲಿ ಎಲ್ಲಿ ಪ್ರಸ್ತಾಪವಾಗಿದೆ?

ಶ್ರೀ ಕೆ.ಜಿ.ಬೋಪಯ್ಯ .– ಬೆಳೆ ಹಾನಿ ಬಗ್ಗೆ ತಿಳಿಸುವಾಗ ಬೇರೆ ಎಲ್ಲಾ ರೀತಿಯ ಬೆಲೆಗಳ ಬಗ್ಗೆಯೂ ವಿವರ ಕೊಟ್ಟಿದ್ದಾರೆ.

ಅಧ್ಯಕ್ಷರು :– 'ರಾಜ್ಯಾದ್ಯಂತ ಇತ್ತೀಚೆಗೆ ಸುರಿದಂತಹ ಭಾರಿ ಮಳೆಯಿಂದ ಪ್ರವಾಹ ಇತ್ಯಾದಿ ಅತಿವೃಷ್ಟಿಯಿಂದ ಉಂಟಾದಂತಹ ಪ್ರಕರಣಗಳೆಷ್ಟು? [ಪ್ರಾದೇಶಿಕ ವಿಭಾಗವಾರು ಮಾಹಿತಿ ನೀಡುವುದು]' ಎಂದು ಪ್ರಶ್ನೆಯಲ್ಲಿದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ.ಜಿ.ಬೋಪಯ್ಯ :– ಅನುಬಂಧದಲ್ಲಿ Paddy, Jowar, Ragi, Maize ಇತ್ಯಾದಿ ಎಲ್ಲಾ ಬೆಳೆಗಳ ಹಾನಿ ಬಗ್ಗೆಯೂ ವಿವರಗಳನ್ನು ಕೊಟ್ಟಿದ್ದಾರೆ. Horticulture crops ಬಗ್ಗೆಯೂ ವಿವರ ಕೊಟ್ಟಿದ್ದಾರೆ.

ಅಧ್ಯಕ್ಷರು :– 'ಇಂತಹ ಮಳೆ ಪ್ರಭಾವದ ಅತಿವೃಷ್ಟಿ ಅನಾಹುತದಿಂದ ಹಾನಿಗೊಳಗಾದ ಬೆಳೆ ನಷ್ಟ ಜನ–ಜಾನುವಾರು ಪ್ರಾಣಹಾನಿ ಎಷ್ಟು? [ಜಿಲ್ಲಾವಾರು ವಿವರಗಳನ್ನು ಒದಗಿಸುವುದು]' ಎಂದು ಪ್ರಶ್ನೆ ಇದೆ. ಅದಕ್ಕೂ ಉತ್ತರ ಕೊಡಲಾಗಿದೆ. ಅಲ್ಲದೆ 'ಸರ್ಕಾರ ಯಾವ ಯಾವ ಬೆಳೆಗಳಿಗೆ ಹಾಗೂ

ಜನ–ಜಾನುವಾರು ಪ್ರಾಣ ಹಾನಿಗೊಳಗಾದವರಿಗೆ ನೀಡಿದ ಪರಿಹಾರವೆಷ್ಟು?' ಎಂಬ ಪ್ರಶ್ನೆಗೂ ಉತ್ತರ ನೀಡಲಾಗಿದೆ.

ಶ್ರೀ ಕೆ.ಜಿ.ಬೋಪಯ್ಯ :– ಮಾನ್ಯ ಸಚಿವರು ನೀಡಿರುವ ಉತ್ತರದ Annexure-2ರಲ್ಲಿ ಕಾಫಿ ಬಗ್ಗೆ ಪ್ರಸ್ತಾಪವಿಲ್ಲ. ಏಲಕ್ಕಿ ಬಗ್ಗೆ ಇಲ್ಲ, ಒಳೆ ಮೆಣಕಾಸಿನ ಬಗ್ಗೆಯೂ ಪ್ರಸ್ತಾಪವಿಲ್ಲ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ 'Banana' ಬೆಳೆ ಹಾನಿ ಬಗ್ಗೆ ಪರಿಹಾರ ಬಗ್ಗೆ ಮಾತ್ರ ಪ್ರಸ್ತಾಪವಿದೆ ಕೊಡಗಿನಲ್ಲಿ ಎಲ್ಲಿ 'Banana' ಇದೆ? ಅದರ ಬಗ್ಗೆ ನಿಮ್ಮ ಬಳಿ ಏನು ಮಾಹಿತಿ ಇದೆ?

ಅಧ್ಯಕ್ಷರು :– ಮಾನ್ಯ ಬೋಪಯ್ಯನವರೆ, ಸ್ವಲ್ಪ ತಾಳಿ. ಮಾನ್ಯ ಸಚಿವರ ಉತ್ತರದಲ್ಲಿ ನೀವು ನೀರಿಕ್ಷಣೆ ಮಾಡಿದ ಉತ್ತರ ಬಂದಿಲ್ಲ. ಇಂತಹ ವಿಚಾರದಲ್ಲಿ ನೀವು ನಿರೀಕ್ಷೆ ಮಾಡಿದಂತೆ ಉತ್ತರ ಕೊಡಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಕೆ.ಜಿ.ಬೋಪಯ್ಯ :– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಇನ್ನೋಂದಿಷ್ಟು ವಿವರವಾದ ಚರ್ಚೆಗಾದರೂ ಅವಕಾಶ ಮಾಡಿಕೊಡಿ. ಮಾನ್ಯ ಸಚಿವರು Annxure–2ರಲ್ಲಿ ಉತ್ತರ ಕೊಟ್ಟಿರುವುದಕ್ಕೆ ಪೂರಕವಾಗಿ ನಾನು ಇದನ್ನು ಕೇಳುತ್ತಿದ್ದೇನೆ. ಪರಿಹಾರ ಕೊಡುವುದರ ಬಗ್ಗೆ ಕೇವಲ ಘೋಷಣೆ ಗಳನ್ನು ಮಾತ್ರ ಮಾಡಲಾಗಿದೆ. ಅಲ್ಲದೆ ರಸ್ತೆಗಳು ಹಾಳಾಗಿರುವ ಬಗ್ಗೆಯೂ ಏನು ಕ್ರಮ ತೆಗೆದುಕೊಂಡಿಲ್ಲ.

[ಗೊಂದಲ]

ಅಧ್ಯಕ್ಷರು :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ಸಮೀಕ್ಷೆ ಸರಿ ಯಾಗಿ ಆಗಿಲ್ಲವೆಂದು ಮಾನ್ಯ ಬೋಪಯ್ಯನವರು ಹೇಳುತ್ತಿದ್ದಾರೆ. ಕಾಫಿ ಬೆಳೆಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದರೂ ಸಹ, ಅದರ ಬಗ್ಗೆ ವರದಿಯಾಗಿಲ್ಲ.

ಅಧ್ಯಕ್ಷರು :– ದಯವಿಟ್ಟು ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರು ಉತ್ತರ ಕೊಟ್ಟಿರುವುದರಲ್ಲಿ ಕಾಫಿ ಬೆಳೆ ಹಾನಿ ಬಗ್ಗೆ ಪ್ರಸ್ತಾಪ ಮಾಡ ಲಾಗಿಲ್ಲ, ಅದಕ್ಕೂ ಪರಿಹಾರ ಕೊಡುವ ಬಗ್ಗೆ ಉತ್ತರ ಕೊಡಿ ಎಂದು ನೀವು ಕೇಳಿ

ಶ್ರೀ ಕೆ ಜಿ.ಬೋಪಯ್ಯ – ಅದನ್ನೇ ನಾನಿಲ್ಲಿ ಕೇಳುತ್ತಿದ್ದೇನೆ ಕಾಫಿ ಬೆಳೆ ಯೊಂದರ ಬಗ್ಗೆ ಮಾತ್ರವಲ್ಲ ಏಲಕ್ಕಿ ಬಗ್ಗೆಯೂ ಇದರಲ್ಲಿ ಪ್ರಸ್ತಾಪವಾಗಿಲ್ಲ

ಅಧ್ಯಕ್ಷರು :– ಅದರ ಬಗ್ಗೆಯೇ ಕೇಳಿ.

ಶ್ರೀ ಕೆ ಜಿ.ಬೋಪಯ್ಯ :– ರಸ್ತೆಗಳ ಬಗ್ಗೆ ಏನೂ ಕೂಡ ಪ್ರಸ್ತಾಪ ವಾಗಿಲ್ಲ. ಆದರೆ ನಮ್ಮ ದುರಾದೃಷ್ಟ ಏನೆಂದರೆ, ಹಣ ಬಿಡುಗಡೆಯೇ ಆಗಿಲ್ಲ. ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ಏಕೆ ಸುಮ್ಮನೆ ದೊಡ್ಡದಾಗಿ ಎಲ್ಲವನ್ನೂ ಕೊಟ್ಟಿದ್ದೇವೆಂದು ಹೇಳುತ್ತೀರಿ?

ಅಧ್ಯಕ್ಷರು :– ಮಾನ್ಯ ಬೋಪಯ್ಯನವರೇ, ಇದೊಂದು ಪ್ರಶ್ನೆಯೇ? ನೀವು ಪ್ರಶ್ನೆ ಕೇಳಿ.

ಶ್ರೀ ಕೆ ಜಿ.ಬೋಪಯ್ಯ :– ಹಣ ಬಿಡುಗಡೆಯಾಗಿಲ್ಲ, ಅದರ ಬಗ್ಗೆ ಉತ್ತರ ಕೊಡಲಿ.

ಅಧ್ಯಕ್ಷರು :– ಅದರ ಬಗ್ಗೆ ಏನು ಹೇಳುತ್ತೀರೋ, ಹೇಳಿ.

ಶ್ರೀ ವಿ ಶ್ರೀನಿವಾಸ್ ಪ್ರಸಾದ್ :– ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಕಾಫಿ ಇತ್ಯಾದಿ ಬೆಳೆ ಹಾನಿಗೆ ಪರಿಹಾರ ಕೊಟ್ಟಿರುವುದು ಬಿಟ್ಟು ಹೋಗಿದೆ ಎಂದು ಹೇಳುತ್ತಿದ್ದಾರೆ. ನಾನು ಆ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ಕೊಂಡು, ಅದು ಬಿಟ್ಟು ಹೋಗಿದ್ದರೆ, ಆ ಬೆಳೆಗೂ ಪರಿಹಾರ ಕೊಡಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ :– ಕಾಫಿ ಬೆಳೆಗೆ ಪರಿಹಾರ ಕೊಡಲಿಕ್ಕೆ ಬರುವುದಿಲ್ಲ.

ಶ್ರೀ ಕೆ.ಜಿ.ಬೋಪಯ್ಯ :– ನಮ್ಮ ಸರ್ಕಾರ ಕೊಟ್ಟಿದೆ. ನೀವು ಕೊಡಲಿಕ್ಕೆ ಬರುವುದಿಲ್ಲವೆಂದು ಹೇಳಿದರೆ ಹೇಗೆ? ನೀವು ಮಂತ್ರಿಗಳಲ್ಲ.

[ಗೊಂದಲ]

ಅಧ್ಯಕ್ಷರು :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಇದೇನು ಪ್ರಶ್ನೋತ್ತರವೇ?

[ಗೊಂದಲ]

ಅಧ್ಯಕ್ಷರು :– ಇದು Question Hour ಏನು? ದಯವಿಟ್ಟು ಕುಳಿತು ಕೊಳ್ಳಿ

ಶ್ರೀ ಕೆ.ಜಿ.ಬೋಪಯ್ಯ: ಹಿಂದಿನ ಸರ್ಕಾರ 9 ಕೋಟಿ ಕೊಟ್ಟಿದೆ

ಅಧ್ಯಕ್ಷರು : ಮಾನ್ಯ ಮಂತ್ರಿಗಳೆ, ಈಗ ಉತ್ತರ ಇರುವುದನ್ನು ಹೇಳಿ, ಇಲ್ಲದಿರುವುದನ್ನು ತರಿಸಿಕೊಡುತ್ತೇನೆಂದು ಹೇಳಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ಬೆಳೆಗೆ ಹಾನಿಯಾಗಿದೆ ಎಂದು ಬಂದಿದೆ. ಈಗಾಗಲೇ ಅವೆಲ್ಲಕ್ಕೂ ಪರಿಹಾರ ವನ್ನು ಜಿಲ್ಲಾದಿಕಾರಿಗಳ ಮೂಲಕ ಕೊಟ್ಟಿದ್ದೇವೆ. ಕೊಡಗು ಜಿಲ್ಲೆಯಲ್ಲಿ ಕಾಫಿ ಬೆಳೆಗೆ ಪರಿಹಾರ ಕೊಡುವುದಿದ್ದರೆ ಅದಕ್ಕೂ ಪರಿಹಾರವನ್ನು ಕೊಡಿಸುತ್ತೇವೆ.

ಅಧ್ಯಕ್ಷರು :– ಮಂತ್ರಿಗಳೆ ಅವರು ಏನು ಹೇಳಿದರೆಂದರೆ, ಕಾಫಿ ಬೆಳೆ, ಏಲಕ್ಕಿ ಬೆಳೆಯ ವಿಷಯವನ್ನು ನೀವು ಹೇಳಲಿಲ್ಲವೆಂದು ಅವರು ಹೇಳತ್ತಿದ್ದಾರೆ ಅದಕ್ಕೆ ಕಾಫಿ ಬೆಳೆ ಎಷ್ಟು ನಷ್ಟವಾಗಿದೆ, ದುಡ್ಡು ಎಷ್ಟು ಕೊಟ್ಟಿದ್ದೀರಿ ಎಂದು ಹೇಳಿ.

ಶ್ರೀ ಕೆ.ಜಿ ಬೋಪಯ್ಯ: ಇಲ್ಲಿ ಕಾಫಿ ಬಗ್ಗೆ, ಕಾರ್ಡಮಮ್ ಬಗ್ಗೆ ಏಕೆ ಇಲ್ಲವೆಂದು ಹೇಳಿ.

[ಗೊಂದಲ]

ಶ್ರೀ ಸಿ.ಟಿ ರವಿ: ಕಾಫಿ, ಏಲಕ್ಕಿ ಪ್ರಮುಖ ಬೆಳೆಗಳು, ಇಲ್ಲಿ ತೋಟ ಗಾರಿಕೆ ಬೆಳೆ ನಷ್ಟದಲ್ಲೂ ಕೂಡ ಪರಿಹಾರ ಕೊಡುತ್ತಾರೋ ಬಿಡುತ್ತಾರೋ ಸೆಕೆಂಡರಿ ಆದರೆ ನಷ್ಟವಾಗಿದೆ ಎನ್ನುವುದನ್ನೂ ಕೂಡ ವರದಿಯಲ್ಲಿ ಎಲ್ಲೂ ಕಾಣಿಸಿಲ್ಲ ಹಾಗಾಗಿ ಇವರದ್ದು ಈ ಬೆಳೆನಷ್ಟಕ್ಕೆ ಸಂಬಂಧಿಸಿದಂತೆ ಅಪೂರ್ಣವಾದ ವರದಿ ಕಾಫಿ ಮತ್ತು ಏಲಕ್ಕಿ ಬೆಳೆ 60% ನಷ್ಟವಾಗಿದೆ. ಹಾಗಾಗಿ 60% ನಷ್ಟವಾಗಿರುವ ಹಿನ್ನೆಲೆಯಲ್ಲಿ ಕಾಫಿ ಮತ್ತು ಏಲಕ್ಕಿಯನ್ನೂ ಇವರು ಅಂದಾಜು ಪಟ್ಟಿಯಲ್ಲಿ ಅಂದಾಜು ಮಾಡಿ ಸೇರಿಸಿಕೊಳ್ಳಬೇಕು. ಅದಕ್ಕೆ ಕೇಂದ್ರ ಸರ್ಕಾರದಿಂದ ಪರಿಹಾರ ಕೇಳಬೇಕಾದಾಗ ಕೇಳಬಹುದು..

ಅಧ್ಯಕ್ಷರು : ಪ್ರಶ್ನೆ ಏನೆಂಬುದನ್ನು ಕೇಳಿ?

ಶ್ರೀ ಸಿ.ಟಿ.ರವಿ: ನನ್ನ ಪ್ರಶ್ನೆ ಇಷ್ಟೇ ಕಾಫಿ ಮತ್ತು ಏಲಕ್ಕಿ ಬೆಳೆ ನಷ್ಟ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ ಅದನ್ನು ಏಕೆ ಬೆಳೆ ನಷ್ಟವೆಂದು ಕಾಣಿಸಿಲ್ಲ?

ಶ್ರೀ ಕೆ.ಆರ್ ರಮೇಶ್ ಕುಮಾರ್: ಈಗ Question Branch ನಲ್ಲಿ ಯಾವರೀತಿ ಮಾಡುತ್ತಿದ್ದಾರೆಂದು ಗೊತ್ತಿಲ್ಲ. ಈ ನಿರ್ದಿಷ್ಟ ಪ್ರಶ್ನೆ ಇದೆಯಲ್ಲಾ, ಇದಕ್ಕೆ ಲಿಖಿತ ಮುಖಾಂತರ ಉತ್ತರ ಕೊಡಬೇಕು, ಇಲ್ಲ ಲಿಸ್ಟ್ ಆಗಬಾರದು. ಇದನ್ನು ಚುಕ್ಕೆ ಗುರುತಿನ ಪ್ರಶ್ನೆ ಮಾಡುತ್ತಾರೆ, ಇವತ್ತು ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಲ್ಲಿ ಪ್ರಶ್ನೆ ಸಂ 169 ನೋಡಿ, ಯಾವುದು ಹೌಸ್ ನಲ್ಲಿ ಡಿಬೇಟ್ ಆಗಬೇಕೋ ಅದು ಅನ್ ಸ್ಟಾರ್ಡ್ ಆಗುತ್ತದೆ. ಇವರೇನು Intentional ಆಗಿ ಮಾಡುತ್ತಾರೊ, ಅಥವಾ Unintentional ಆಗಿ ಮಾಡುತ್ತಾರೊ ಗೊತ್ತಾಗು ವುದಿಲ್ಲ ಇಂಥೊಂದು Elaborate Questions ಬಂದಾಗ it is a matter to be discussed in the house at length ಇದನ್ನು starred question ಮಾಡುತ್ತಾರೆ. starred question ಮಾಡಿದಾಗ ನೀವು ಹೌಸ್ ಅನ್ನು ಹೇಗೆ ರೆಗ್ಯುಲೇಟ್ ಮಾಡುವುದು? ಎಲ್ಲಾ ಕಡೆಯಿಂದ ಜನರು ಏಳುತ್ತಾರೆ, supplementaries ಕೇಳುತ್ತಾರೆ, you have to satisfy all the members Therefore, some kind of an invigilation into the whole process of preparing the

questionnaire by the Question Branch must be done You are doing totally irrationally You look at question no 169 that has come under the unstarred question which is raised by the Honourable Member Sri N A Haris, which is a very relevant question That becomes unstarred ಇಷ್ಟು lengthy answer ಬರತಕ್ಕದ್ದನ್ನು ನೀವು starred question ಮಾಡುತ್ತೀರಿ How should the presiding officer conduct the proceedings? Some discretion should be there.

ಅಧ್ಯಕ್ಷರು: ರಮೇಶ್ ಕುಮಾರ್ ಅವರೆ, ಈಗ ತಾವು ನೀಡಿದ ಸಲಹೆ ಸರಿ ಇದೆ. ವಾಸ್ತವಿಕವಾಗಿ ಪ್ರತಿಯೊಂದು ಪ್ರಶ್ನೆಯನ್ನು ನಾನು ನೋಡಿರಲ್ಲಿಲ್ಲ, ಅವರೇ ಅದನ್ನು ಮಾಡಿರುತ್ತಾರೆ. ಏಕೆಂದರೆ it is a matter of expertise ಯಾವುದನ್ನು starred ಮಾಡುಬೇಕು ಯಾವುದನ್ನು unstarred ಮಾಡಬೇಕೆ ನ್ನುವುದಿದೆಯಲ್ಲಾ it is purely..

ಶ್ರೀ ಕೆ.ಆರ್ ರಮೇಶ್ ಕುಮಾರ್: ಲಾಟರಿ ಹಾಕುವುದರಿಂದ ಈ ಸದನದಲ್ಲಿ ಗಹನವಾಗಿ ಚರ್ಚೆಮಾಡುವಂಥ ವಿಚಾರಗಳು ಲಾಟರಿ ವಸ್ತುವಾಗಬಾರದು.That is the reason why I am appealing to youthat you may have to exercise your individual discretion

ಅಧ್ಯಕ್ಷರು: ಓಕೆ, ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಕಂದಾಯ ಸಚಿವರ ಉತ್ತರದಿಂದ ಸ್ಪಷ್ಟತೆ ಬೇಕಾಗಿರುವುದು ಇಷ್ಟೇ.ಮೊದಲನೆಯದಾಗಿ ಕೇಂದ್ರ ಸರ್ಕಾರವೇನು 75% ಭಾಗದ ಹಣ ಬಿಡುಗಡೆ ಮಾಡಿದೆ, ಬಿಡುಗಡೆ ಯಾಗಿರುವ ಆ ಹಣದ್ದು ಪೂರ್ಣಕೊಟ್ಟಿಲ್ಲ. ಉದಾಹರಣೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ 14 ಕೋಟಿ ಅಡಿಕೆ, ಭತ್ತದಿಂದ ಹಾನಿಯಾಗಿದೆ ಎಂದಿದೆ, ಅದರಲ್ಲಿ 7 ಕೋಟಿ ಕೊಟ್ಟಿದ್ದಾರೆ, ಇನ್ನು 7 ಕೋಟಿ ಹಣ ಬರಲ್ಲಿಲ್ಲ. ಹಾಗಾಗಿ ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ರೈತರು ಗೊಂದಲದಲ್ಲಿದ್ದಾರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ. ಬಜೆಟ್‌ನಲ್ಲಿ ಮಾನ್ಯ ಮುಖ್ಯ

ಮಂತ್ರಿಗಳು ಏನು ಹೇಳಿದರೆಂದರೆ,ವಿಕೋಪ ಉಪಶಮನ ನಿಧಿಯನ್ನು ಸ್ಥಾಪನೆ ಮಾಡುತ್ತೇವೆ, ಈ ರೀತಿ ಬರ, ಪ್ರವಾಹ, ಕೀಟಬಾದೆ ಇತ್ಯಾದಿ ನೈಸರ್ಗಿಕ ತೊಂದರೆಯುಟಾದರೆ ಈ ಹಣದಿಂದಲೂ ಸಹಾಯ ಮಾಡುತ್ತೇವೆಂದು ಹೇಳಿದರು. ಈ ನಿಧಿ ಸ್ಥಾಪನೆಯಾಗಿದೆಯೋ ಏನೋ, ಈ ನಿಧಿಯಿಂದ ಹಣವನ್ನು ಕೊಡುತ್ತಿದ್ದಿರೋ ಇಲ್ಲವೋ? ಬಜೆಟ್‌ನಲ್ಲಿ ಹೇಳಿದ್ದಾರೆ.

ಅಧ್ಯಕ್ಷರು: ದಯವಿಟ್ಟು ಈ ವಿಚಾರಗಳನ್ನು ಪ್ರಶ್ನೆಯಲ್ಲಿ ಕೇಳಿ, ಚರ್ಚೆಯಲ್ಲಿ ಬರುವುದಿಲ್ಲ, ಇದೆಲ್ಲಾಪಾಲಿಸಿ ಮ್ಯಾಟರ್, ಬಜೆಟ್ ಮೇಲೆ ಚರ್ಚೆ ಮಾಡಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ನಿಮ್ಮ ಅಡಿಕೆ ಬೆಳೆ ಏನು ಹಾನಿಯಾಗಿದೆ ಅದಕ್ಕೆ ಹಣ ಬಿಡುಗಡೆ ಮಾಡಿದ್ದೇವೆ. ಅಡಿಕೆ ಬೆಳೆಗೆ ಕೊಳ ರೋಗ ಏನು ಬಂದಿದೆ, ಅದಕ್ಕೆ ಪರಿಹಾರ ಕೊಡಬೇಕೆಂದು ಸಚಿವ ಸಂಪುಟದಲ್ಲಿ ನಾವು ತೀರ್ಮಾನ ತೆಗೆದುಕೊಂಡು ಈಗಾಗಲೇ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅರ್ಧ ಬಂದಿದೆ, ಇನ್ನೂ ಅರ್ಧ ಹಣ ಬರಬೇಕಾಗಿದೆ.

ಶ್ರೀವಿ.ಶ್ರೀನಿವಾಸ ಪ್ರಸಾದ್: ಬರುತ್ತಿದೆ, ಉಳಿಕೆ ಹಣ ಬಿಡುಗಡೆ ಮಾಡುತ್ತೇವೆ, ನಾವು ಕಳುಹಿಸಿ ಕೊಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ: ಇದನ್ನು ಅರ್ಧಗಂಟೆ ಚರ್ಚೆಗೆ ಹಾಕಿಬಿಡಿ, ಈ ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು: ಬೋಪಯ್ಯನವರೆ, ವಿರೋಧ/ಪಕ್ಷದ ನಾಯಕರಾದ ಕುಮಾರಸ್ವಾಮಿಯವರು ಈಗಾಗಲೇ ಚರ್ಚೆಗೆ ಒಂದನ್ನು ಕೊಟ್ಟಿದ್ದಾರೆ, ಹೆಚ್ಚು ಕಡಿಮೆ ಇವೆಲ್ಲಾ ಅದರಲ್ಲಿ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ

ಶ್ರೀ ಸಿ.ಟಿ.ರವಿ: ಕೊಡಗಿಗೆ ಒಂದು ಪೈಸೆನೊ ಬಿಡುಗಡೆ ಮಾಡಿಲ್ಲ ಸರ್

ಶ್ರೀ ಬಿ.ಬಿ.ನಿಂಗಯ್ಯ: ಒಂದು ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು ಮಾಡಿಕೊಡುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ: ದಯವಿಟ್ಟು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು: ಕೊಡೋಣ, ಹಾಗೆ ಮಾಡೋಣ, ಮುಂದೆಕ್ಕೆ ಹಾಕಿ ಈಗ ಬೇಡ ಬಿಡಿ, ಅರ್ಧಗಂಟೆ ಕಾಲ ಚರ್ಚೆಗೆ ಹಾಕಿ ಅವಕಾಶ ಮಾಡಿಕೊಡೋಣ

Menance of bear and Chuta

8(135) ಶ್ರೀ ವೈ ಎಸ್ ವಿ ದತ್ತಾ (ಕಡೂರು) : ಮಾನವ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅನೇಕ ಗ್ರಾಮಗಳಲ್ಲಿ ಕರಡಿ ಮತ್ತು ಚಿರತೆಗಳ ಹಾವಳಿ ಹೆಚ್ಚಾಗಿರುವುದು ಅದರಲ್ಲಿಯೂ ಚೌಳ ಹಿರಿಯೂರು ಹೋಬಳಿ ಕಲ್ಕೆರೆಯಲ್ಲಿ ಅನೇಕ ಜನರು ಮೃತಪಟ್ಟಿರುವುದು ಹಾಗೂ ಅಂಗವಿಕಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಾದ್ದಲ್ಲಿ, ಇದುವರೆವಿಗೂ ಕರಡಿ ಮತ್ತು ಚಿರತೆಗಳ ದಾಳಿಯಿಂದ ಮೃತರಾದವರ ಮತ್ತು ಅಂಗವಿಕಲರಾದವರ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು)

ಇ) ಇತ್ತೀಚಿಗೆ ಕಲ್ಕೆರೆ ಗ್ರಾಮದಲ್ಲಿ ಕರಡಿಗಳ ದಾಳಿಯಿಂದ ಓರ್ವ ಮಹಿಳೆ ಮೃತಳಾಗಿದ್ದು ಅಲ್ಲಿ ಪರಿಸ್ಥಿತಿ ಗಂಭೀರವಾಗಿದ್ದು, ಈ ಪ್ರದೇಶದಲ್ಲಿ ಕರಡಿಗಳ ಸಂಖ್ಯೆ ಹತ್ತಕ್ಕೂ ಹೆಚ್ಚಿರುವುದರಿಂದ ಕರಡಿಗಳ ದಾಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,